# ಅಮೆರಿಕಾದ
# ಎತ್ತರದ ಮನುಷ್ಯ

ಅಮೆರಿಕಾ ಖಂಡದ ಎತ್ತರದ ಮನುಷ್ಯನಾರು.. ಎಂಬ ಪ್ರಶ್ನೆಗೆ ಕೊನೆಗೂ ಉತ್ತರ ಸಿಕ್ಕಿದೆ. ಕಳೆದ ತಿಂಗಳ ಕೊನೆಯಲ್ಲಿ ಅಮೆರಿಕಾದ ಮಿನ್ನೆಸೋಟಾದ 27 ವರ್ಷದ ಐಗೋರ್ ವೋವ್ಕೋವಿನ್ ಎಂಬ ಹೆಸರಿನ ಚೆಲುವಾಂತ ಚೆನ್ನಿಗನಿಗೆ ಈ ಪಟ್ಟ ದೊರೆತಿದೆ.

ಈ ಗಿನ್ನೆಸ್ ದಾಖಲೆ ವೀರನ ಎತ್ತರ ಬರೋಬ್ಬರಿ 7ಅಡಿ, 8.33 ಅಂಗುಲ! ಈ ಮೊದಲು ಅಮೆರಿಕಾದ ಎತ್ತರದ ಮನುಷ್ಯ ಎಂದು ಘೋಷಿಸಲಾಗಿದ್ದ ವರ್ಜೀನಿಯಾದ ಜಾರ್ಜ್ ಬೆಲ್ ಈಗ ಇತಿಹಾಸದ ಬುಟ್ಟಿಗೆ ಸೇರಿದ್ದಾನೆ. ಮೂಲತಃ ರಶಿಯಾದ ಉಕ್ರೇನ್‌ನ ಐಗೋರ್ 7ನೇ ವಯಸ್ಸಿನಲ್ಲಿ ತಾಯಿ ಸ್ವೆಟ್ಲಾನಾ ಜೊತೆ ಅಮೆರಿಕಾದ ಮಿನ್ನೆಸೋಟಾಗೆ ವಲಸೆ ಬಂದವನು. ತನ್ನ ಎತ್ತರದ ಕಾರಣಗಳಿಂದ ಕಾರ್‌ಗಳಲ್ಲಿ ಕೂಡುವ ಸಂದರ್ಭದಲ್ಲಿ, ಕಾಲಿಗೆ ತಕ್ಕ ಶೂ ಹುಡುಕುವಾಗ ಮಜುಗುರದ ಸಂದರ್ಭಗಳನ್ನು ಎದುರಿಸಿದವನು. ಅದನ್ನೀಗ ನೆನಪಿಸಿಕೊಂಡು ನಗೆಯಾಡುತ್ತಾನೆ.

ಜಗತ್ತಿನ ಅತ್ಯಂತ ಎತ್ತರದ ಮನುಷ್ಯ ಟರ್ಕಿಯ ಸುಲ್ತಾನ್ ಕೋಸೇನ್‌ಗಿಂತ (8 ಅಡಿ 1 ಅಂಗುಲ) ಕೇವಲ 3.67 ಅಂಗುಲ ಕಡಿಮೆಯಿರುವ ಐಗೋರ್ ಎತ್ತರದಲ್ಲಿ ಇನ್ನಷ್ಟು ಬೆಳೆಯಲಿದ್ದಾನೆ ಎನ್ನುವುದು ವೈದ್ಯರ ಅಂದಾಜು. ಆಗ ಕೋಸೇನ್ ದಾಖಲೆಯೂ ಮೂಲೆಗುಂಪು ಆಗಬಹುದು!

■ ಬಿ.ಲಕ್ಷ್ಮೀಕಾಂತ್ ಸಾ




